**ದಿನಾಂಕ: 21.09.2015ರ ಸೋಮವಾರ ಅಪರಾಹ್ನ 2.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸುರಯ್ಯಾ ಅಬ್ರಾರ್‌ರವರ ಅಧ್ಯಕ್ಷತೆಯಲ್ಲಿ ಕಛೇರಿ ಸಭಾಂಗಣದಲ್ಲಿ ನಡೆಯುವ ಪ್ರಾಧಿಕಾರದ ಸಾಮಾನ್ಯ ಸಭೆಯ ನಡಾವಳಿ.**

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಶ್ರೀಮತಿ ಸುರಯ್ಯಾ ಅಬ್ರಾರ್, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1 | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನ ಸಭಾ ಪತಿಗಳು ಹಾಗೂ ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 2. | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. | 2 | ಮಾನ್ಯ ಶ್ರೀ ಟಿ.ಜಾನ್‌ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 3 | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ (ಪರವಾಗಿ), ಮಡಿಕೇರಿ. | 3 | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ,<br>ಮಡಿಕೇರಿ. |
| 4 | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ (ಪರವಾಗಿ), ಮಡಿಕೇರಿ. | 4 | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 5 | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. |
| 6 | ಸಹಾಯಕ ನಿರ್ದೇಶಕರು, ನಗರ ಯೋಜನಾ ಸದಸ್ಯರು,<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,<br>ಮಡಿಕೇರಿ. | 6 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು |
| 7 | ಶ್ರೀ ರಾಜಶೇಖರ್ ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ,<br>ಮಡಿಕೇರಿ. | 7 | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| | | 8 | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಮೈಸೂರು. |
| | | 9 | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| | | 10 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸುರಯ್ಯಾ ಅಬ್ರಾರ್‌ರವರು, ಸೋಮವಾರಪೇಟೆ ಮತ್ತು ಮಡಿಕೇರಿ ಕ್ಷೇತ್ರದ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳು ಮತ್ತು ವಿಶೇಷ ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ ಅಂದರೆ ದಿನಾಂಕ: 17.06.2015ರಂದು ನಡೆದ ಪ್ರಾಧಿಕಾರದ ಸಭೆಯ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭಾ ನಡಾವಳಿಯನ್ನು ಓದಲಾಯಿತು ಹಾಗೂ ಸರ್ಕಾರದಿಂದ ಅನುಮೋದನೆಗೊಂಡ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರ ನಕ್ಷೆಯನ್ನು ಸಭೆಯಲ್ಲಿ ತೋರಿಸುತ್ತಾ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳು ಹಾಗೂ ವಿವಿಧ ಭೂ ಉಪಯೋಗಗಳ ಬಗ್ಗೆ ಮಾಹಿತಿಯನ್ನು ಸಭೆಯಲ್ಲಿ ನೀಡಿದರು. ಹಾಗೂ ವಿಷಯಸಂಖ್ಯೆ 5ರಲ್ಲಿ ಗದ್ದಿಗೆ ಉದ್ಯಾನವನಕ್ಕೆ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವ ಬಾಬ್ತು ಕಾರ್ಯಾದೇಶ ನೀಡಿದ ಅವಧಿ ಮುಗಿದು ಕಾಮಗಾರಿಗಳನ್ನು ಮುಗಿಸಲು ಕೊನೆಯ ಗಡವು ಅವಧಿಯನ್ನು ನೀಡಿದ್ದರೂ ಸಹ ಗುತ್ತಿಗೆದಾರರಾದ ಶ್ರೀ ಸದಾಶಿವ ರೈರವರು ಇನ್ನೂ ಕಾಮಗಾರಿಗಳನ್ನು ಮುಗಿಸದ ಕಾರಣ ಸಭೆಯಲ್ಲಿ ಅಸಮಧಾನ ವ್ಯಕ್ತವಾಯಿತು. ಈ ಬಗ್ಗೆ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು ಪ್ರತಿಕ್ರಿಯಿಸುತ್ತಾ, ಮತ್ತೊಮ್ಮೆ ಗದ್ದಿಗೆ ಉದ್ಯಾನವನದ ಹೆಚ್ಚುವರಿ ಕಾಮಗಾರಿಗಳನ್ನು ಅಳವಡಿಸಿರುವ ಬಾಬ್ತು ಪರಿಶೀಲಿಸಿ, ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಮುಗಿಸುವಂತೆಯೂ ತಪ್ಪಿದಲ್ಲಿ ಅವರಿಗೆ ನೀಡಿರುವ ಕಾರ್ಯದೇಶವನ್ನು ರದ್ದುಪಡಿಸಿ, ಪಾವತಿಸಲು ಬಾಕಿ ಇರುವ ಮೊಬಲಗನ್ನು ತಡೆಹಿಡಿಯುವಂತೆ ಸಭೆಯಲ್ಲಿ ಸೂಚಿಸಿದರು ಮತ್ತು ವಿಷಯಸಂಖ್ಯೆ 6ರಲ್ಲಿ ರೋಷನಾರ ಕೆರೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರು ಪೌರಾಯುಕ್ತರನ್ನು ಸದರಿ ಅಭಿವೃದ್ಧಿಗೆ ಆಗುವ ಖರ್ಚಿನ ಅಂದಾಜು ದರಪಟ್ಟಿಯನ್ನು ಸಲ್ಲಿಸುವ ಬಗ್ಗೆ ವಿವರ ಕೋರಿದರು. ಇದಕ್ಕೆ ಪೌರಾಯುಕ್ತರು ಈಗಾಗಲೇ ದರಪಟ್ಟಿಯು ಸಿದ್ಧವಾಗಿದ್ದು, ಸದ್ಯದಲ್ಲೇ ಕಳುಹಿಸಿ ಕೊಡಲಾಗುವುದೆಂದು ಮಾಹಿತಿಯನ್ನು ನೀಡಿದರು. ದರಪಟ್ಟಿ ಸ್ವೀಕೃತಗೊಂಡ ತಕ್ಷಣದಲ್ಲೇ ಅಂದಾಜು ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಲು ಆಯುಕ್ತರಿಗೆ ಸಭೆಯಲ್ಲಿ ತಿಳಿಸಲಾಯಿತು. ಉಳಿದಂತೆ ಹಿಂದಿನ ಸಭೆಯ ನಡಾವಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಲಾಯಿತು.

**2) ವಿಷಯ ಸಂಖ್ಯೆ :2**

2015ನೇ ಏಪ್ರಿಲ್ ತಿಂಗಳಿನಿಂದ ಆಗಸ್ಟ್ 2015ನೇ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1 | ಪರಿಶೀಲನಾ ಶುಲ್ಕ. | ರೂ. | 1,28,196.00 |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 26,565.00 |
| 3 | ಕೆರೆ ಅಭಿವೃದ್ಧಿ ಶುಲ್ಕ | ರೂ. | 5,00,608.00 |
| 4 | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 1,210.00 |
| 5 | ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ | ರೂ. | 1,74,023.00 |
| 6 | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 12,000.00 |
| 7 | ಹೆಚ್ಚುವರಿ ಪಾವತಿಸಿದ ವೇತನ ಪ್ರಾಧಿಕಾರದ ನಿಧಿಗೆ ಮರು ಜಮೆ | ರೂ. | 11,596.00 |
| 8 | ಇತರೆ | ರೂ. | 1,510.00 |
| | **ಒಟ್ಟು ಜಮೆ** | ರೂ. | **8,55,708.00** |

**ಖರ್ಚು**

| | | | |
|---|---|---|---|
| 1 | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆಗಳು | ರೂ. | 1,41,690.00 |
| 2 | ಆಯುಕ್ತರ ಪ್ರಭಾರ ಭತ್ಯೆ | ರೂ. | 10,540.00 |
| 3 | ಸಿಬ್ಬಂದಿ ವೇತನ | ರೂ. | 1,46,965.00 |
| 4 | ಕಂಪ್ಯೂಟರ್‌ನ ಮೊನಿಟರ್ ಖರೀದಿ+ಜೆರಾಕ್ಸ್ ಮಿಷನ್ ದುರಸ್ಥಿ+ಟೋನರ್ ಖರೀದಿ ಮತ್ತು ಇತರೆ ವೆಚ್ಚ | ರೂ. | 20,683.00 |
| 5 | ವೆಬ್‌ಸೈಟ್ ನವೀಕರಣ ಮತ್ತು ನಿರ್ವಹಣೆ ವೆಚ್ಚ | ರೂ. | 7,500.00 |
| 6 | ವಿದ್ಯುಚ್ಛಕ್ತಿ ಬಿಲ್ ಪಾವತಿ ವೆಚ್ಚ | ರೂ. | 4,019.00 |
| 7 | ದೂರವಾಣಿ ವೆಚ್ಚ | ರೂ. | 6,701.00 |
| 8 | ಕಚೇರಿ ಸಾದಿಲ್ವಾರು ವೆಚ್ಚ | ರೂ. | 5,000.00 |
| 9 | ಸ್ಟೇಷನರಿ ಖರೀದಿ | ರೂ. | 8,654.00 |
| 10 | ದಿನಪತ್ರಿಕೆ ಖರೀದಿ ವೆಚ್ಚ | ರೂ. | 3,400.00 |
| 11 | ಸಭಾ ಉಪಹಾರ ವೆಚ್ಚ | ರೂ. | 1,085.00 |
| 12 | ರಾಷ್ಟ್ರೀಯ ಹಬ್ಬಕ್ಕೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ವಂತಿಕೆ ಪಾವತಿಸಿರುವುದು | ರೂ | 3,000.00 |
| 13 | ಪ್ರಯಾಣಭತ್ಯೆ ಬಿಲ್ ಪಾವತಿ | ರೂ. | 2,500.00 |
| 14 | ಮುದ್ರಣ ವೆಚ್ಚ | ರೂ. | 10,840.00 |
| 15 | ಅಂಚೆ ಚೀಟಿ ಖರೀದಿ ವೆಚ್ಚ | ರೂ. | 1,000.00 |
| 16 | ಗದ್ದಿಗೆ ಉದ್ಯಾನವನಕ್ಕೆ ಸಂಬಂಧಿಸಿದ ವೆಚ್ಚ<br>1. ಗದ್ದಿಗೆ ಉದ್ಯಾನವನಕ್ಕೆ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿಸಿರುವ ಬಾಬ್ತು ಗುತ್ತಿಗೆದಾರರಾದ ಶ್ರೀ ಸದಾಶಿವ ರೈಗೆ ಪಾವತಿ | ರೂ. | 5,50,993.00 |
| 17 | ಇತರೆ | ರೂ. | 60.00 |
| | **ಒಟ್ಟು ವೆಚ್ಚ** | ರೂ. | **9,24,630.00** |

**ಘೋಶ್ವಾರೆ:**

| | | | |
|---|---|---|---|
| 1 | 2015 ಏಪ್ರಿಲ್ ತಿಂಗಳಿನ ಆರಂಭಿಕ ಶಿಲ್ಕು | ರೂ. | 1,63,67,727.00 |
| 2 | 2015ರ ಏಪ್ರಿಲ್ ತಿಂಗಳಿನಿಂದ ಆಗಸ್ಟ್ 2015ರವರೆಗಿನ ಜಮೆ | ರೂ. | 8,55,708.00 |
| 3 | 2015ರ ಏಪ್ರಿಲ್ ತಿಂಗಳಿನಿಂದ ಆಗಸ್ಟ್ 2015ರವರೆಗಿನ ಒಟ್ಟು ಜಮೆ | ರೂ. | **1,72,23,435.00** |
| 4 | 2015ರ ಏಪ್ರಿಲ್ ತಿಂಗಳಿನಿಂದ ಆಗಸ್ಟ್ 2015ರವರೆಗಿನ ಖರ್ಚು | ರೂ. | 9,24,630.00 |
| 5 | 2015ನೇ ಆಗಸ್ಟ್ (31.08.2015) ತಿಂಗಳ ಆಖೈರು ಶಿಲ್ಕು | ರೂ. | **1,62,98,805.00** |
| 6 | ಠೇವಣಿ ಇಟ್ಟಿರುವುದು | ರೂ. | 88,33,517.00 |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** 2015ನೇ ಏಪ್ರಿಲ್ ತಿಂಗಳಿನಿಂದ ಆಗಸ್ಟ್ 2015ನೇ ತಿಂಗಳವರೆಗಿನ ಜಮಾ ರೂ. 8,55,708/– ಮತ್ತು ಖರ್ಚು ರೂ. 9,24,630/–ಗಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3) ವಿಷಯಸಂಖ್ಯೆ 3 : ಶ್ರೀ ಬಿ.ಎಸ್.ಮಧುಸೂಧನ್‌ರವರು ಮಡಿಕೇರಿ ನಗರಸಭಾ ಬ್ಲಾಕ್ ನಂಬರ್ 7ರ ಸರ್ವೆ ನಂಬರ್ 59 (ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 373/2)ರಲ್ಲಿರುವ 1.45ಎಕರೆ ವಿಸ್ತೀರ್ಣದ ಜಮೀನನ್ನು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ಉದ್ಯಾನವನ ಮತ್ತು ಬಯಲು ಪ್ರದೇಶಕ್ಕೆಂದು ಕಾಯ್ದಿರಿಸಿರುವುದನ್ನು ಕೈಬಿಡಲು ಕೋರಿ ಮನವಿ.**

**ಟಿಪ್ಪಣಿ:-** ಪ್ರಸ್ತಾಪಿತ ಜಾಗವು ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಬರುತ್ತಿದ್ದು, ಹಿಲ್ ರಸ್ತೆಯಿಂದ ಗಣೇಶ ಕಲ್ಯಾಣ ಮಂಟಪದ ಹತ್ತಿರ ಕೆಂಡದ ಗುಂಡಿಯ ಸಮೀಪವಿರುವ ಜಮೀನಾಗಿರುತ್ತದೆ. ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ರಸ್ತೆಗೆ ಹೊಂದಿಕೊಂಡಂತೆ ಬರುವ ಭಾಗಶಃ ಜಾಗವು ವಾಣಿಜ್ಯ ವಲಯಕ್ಕೆಂದು ಹಾಗೂ ಇದಕ್ಕೆ ಹೊಂದಿಕೊಂಡಂತಿರುವ ಹಿಂಭಾಗದಲ್ಲಿ ಬರುವ ಉಳಿಕೆ ಜಾಗವು ಉದ್ಯಾನವನ ಮತ್ತು ಬಯಲು ಪ್ರದೇಶಕ್ಕೆಂದು ಕಾಯ್ದಿರಿಸಲಾಗಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:-** ಪ್ರಸ್ತಾವಿತ ಜಮೀನಿನಲ್ಲಿ ಭಾಗಶಃ ಜಾಗವು ಉದ್ಯಾನವನ ಮತ್ತು ಬಯಲು ಪ್ರದೇಶದಲ್ಲಿ ಬರುತ್ತಿದ್ದು, ಸದರಿ ಜಾಗದ ಭೂ ಉಪಯೋಗ ಬದಲಾವಣೆ ಪ್ರಸಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅವಕಾಶವಿರುವುದಿಲ್ಲ.

ಪ್ರಸ್ತಾವನೆಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ಪರಿಷ್ಕೃತ-1 2021ಕ್ಕೆ ಸರ್ಕಾರವು ದಿನಾಂಕ:21.08.2014ರಲ್ಲಿ ಅಂತಿಮ ಅನುಮೋದನೆ ನೀಡಿದ್ದು, ಅನುಮೋದನೆಯಾದ ದಿನಾಂಕದಿಂದ 2ವರ್ಷಗಳ ಅವಧಿಯವರೆಗೆ ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಾರದಾಗಿಯೂ ಹಾಗೂ ಸರ್ಕಾರದ ಪತ್ರ ಸಂಖ್ಯೆ ನಅಇ/328/ಭೂಬವಿ/97, ದಿನಾಂಕ:04.11.97ರ ಪತ್ರದಲ್ಲಿ ಉದ್ಯಾನವನ ಬಯಲುಜಾಗ ಹಾಗೂ ಸಾರ್ವಜನಿಕ/ಅರೆಸಾರ್ವಜನಿಕ ಉದ್ದೇಶಗಳಿಗೆ ಕಾಯ್ದಿರಿಸಿರುವ ಜಮೀನನ್ನು ಸಹ ಇತರ ಉದ್ದೇಶಗಳಿಗೆ ಭೂ ಉಪಯೋಗ ಬದಲಾವಣೆ ಮಾಡಲು ಯಾವುದೇ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಾರದೆಂದು ನಿರ್ದೇಶನವಿರುವುದರಿಂದ ಸದರಿ ಪ್ರಸ್ತಾವನೆಯನ್ನು ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಸಲ್ಲಿಸಲು ಅವಕಾಶವಿರುವುದಿಲ್ಲವೆಂದು ಸಭೆಯಲ್ಲಿ ಆಯುಕ್ತರು ತಿಳಿಸಿದರು. ಆದರೆ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ) 2021ರನ್ವಯ ಅರ್ಜಿದಾರರು ಕೋರಿರುವ ರಸ್ತೆಗೆ ಹೊಂದಿಕೊಂಡಂತೆ (16.00ಮೀ ಡೆಪ್ತ್) ಬರುವ ಭಾಗಶಃ ವಾಣಿಜ್ಯ ಉದ್ದೇಶಕ್ಕೆಂದು ಕಾಯ್ದಿರಿಸಿರುವ ಜಾಗವನ್ನು ಅದೇ ಉದ್ದೇಶಕ್ಕೆ ಪರಿಗಣಿಸಬಹುದೆಂದು ಉಳಿದಂತೆ ಉದ್ಯಾನವನ ಮತ್ತು ಬಯಲುಪ್ರದೇಶಕ್ಕೆಂದು ಕಾಯ್ದಿರಿಸಿರುವ ಜಾಗವನ್ನು ಯಥಾಸ್ಥಿತಿಯಲ್ಲಿ ಅದೇ ಉದ್ದೇಶಕ್ಕೆ ಕಾಯ್ದಿರಿಸುವಂತೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**4)ವಿಷಯ ಸಂಖ್ಯೆ 4 :- ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 10/44ರಲ್ಲಿನ 3.00ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ನಿರಾಕ್ಷೇಪಣ ಪತ್ರ ನೀಡುವಂತೆ ಕೋರಿ ಶ್ರೀ ಎನ್.ಪರಮಶಿವ ಮತ್ತು ಶ್ರೀಮತಿ ಶೀಲಾ ಪರಮಶಿವರವರು ಅರ್ಜಿ ಸಲ್ಲಿಸಿರುವ ಬಗ್ಗೆ.**

**ಟಿಪ್ಪಣಿ:-**ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದು, ಉಕ್ಕುಡ ರಸ್ತೆಯ ರಾಜರಾಜೇಶ್ವರಿ ನಗರದ ಸಮೀಪವಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:-** ಪ್ರಶ್ನಿತ ಜಮೀನು ಕೃಷಿ ವಲಯದಲ್ಲಿ ಬರುತ್ತಿರುವುದರಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಲು ಅವಕಾಶವಿರುವುದಿಲ್ಲ ಹಾಗೂ ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ

ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 2021ಕ್ಕೆ ಅಂತಿಮ ಆದೇಶ ನೀಡಿದ ಪತ್ರ ಸಂಖ್ಯೆ:ನಅಇ/125/ಮೈಅಪ್ರಾ/2013, ದಿನಾಂಕ:21.08.2014ರ ಆದೇಶದ ಪತ್ರದಲ್ಲಿ ಆದೇಶದ ದಿನಾಂಕದಿಂದ 2ವರ್ಷಗಳವರೆಗೆ ಅಂದರೆ ಆಗಸ್ಟ್ 2016ರವರೆಗೆ ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಕೂಡದೆಂದು ಷರತ್ತು ವಿಧಿಸಿ ಅನುಮೋದಿಸಲಾಗಿರುತ್ತದೆ.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಸಭಾ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:-**ಪ್ರಸ್ತಾವಿತ ಕೃಷಿ ಜಮೀನನ್ನು ಸರ್ಕಾರದ ಆದೇಶದಂತೆ ಭೂ ಉಪಯೋಗ ಬದಲಾವಣೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು 2016ನೇ ಆಗಸ್ಟ್ ತಿಂಗಳವರೆಗೆ ಅವಕಾಶವಿರುವುದಿಲ್ಲ. ನಂತರದ ಅವಧಿಯಲ್ಲಿ ಅರ್ಜಿದಾರರು ಭೂ ಉಪಯೋಗ ಬದಲಾವಣೆ ಕೋರಿದಲ್ಲಿ ಪ್ರಸ್ತಾವನೆಯನ್ನು ನಿಯಾಮಾವಳಿಗಳನ್ವಯ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಪ್ರಾಧಿಕಾರದ ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ತೀರ್ಮಾನಿಸಲಾಯಿತು. ಆದರೆ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರದ ಪತ್ರ ಸಂಖ್ಯೆ:ನಅಇ/266/ಮೈಅಪ್ರಾ/2015, ದಿನಾಂಕ:20.05.2015ರ ಪತ್ರದಲ್ಲಿ ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 10/44ರಲ್ಲಿನ 3.00ಎಕರೆ ಜಮೀನನ್ನು ಕೃಷಿ ವಲಯದಿಂದ ಕೃಷಿಯೇತರ ಜಾಗವನ್ನಾಗಿ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಕೋರಿರುವ ಪ್ರಸ್ತಾವನೆಯನ್ನು ನಿಯಾಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನವಿರುತ್ತದೆ. ಸದರಿ ಜಮೀನಿನಲ್ಲಿ ಅರ್ಜಿದಾರರು ಹೊಟೇಲ್ ನಡೆಸುವ ಉದ್ದೇಶದಿಂದ ದಿನಾಂಕ:18.12.2012ರಲ್ಲಿ ನಡೆದ ಹೂಡಿಕೆದಾರರ ಸಮಾವೇಶದಲ್ಲಿ ಅರ್ಜಿ ಸಲ್ಲಿಸಿ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಈ ಜಮೀನಿನ ಸಮೀಪದಲ್ಲಿ ಬರುವ ಕರ್ಣಂಗೇರಿ ಗ್ರಾಮದ ಸ.ನಂ.10/2ರಲ್ಲಿ ವೈದ್ಯಕೀಯ ಮಹಾ ವಿದ್ಯಾಲಯದ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ಬರುತ್ತಿದ್ದು, ವಾಣಿಜ್ಯ ಉದ್ದೇಶಕ್ಕೆ ಸೂಕ್ತವಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಅರ್ಜಿದಾರರು ಕೋರಿರುವ ವಾಣಿಜ್ಯ ಉದ್ದೇಶದ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಸರ್ಕಾರದ ಮಂಜೂರಾತಿ ಅನುಮೋದನೆಗಾಗಿ ಸಲ್ಲಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**5) ವಿಷಯ ಸಂಖ್ಯೆ 5:- ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂಬರ್ 206/24ರಲ್ಲಿನ 0.20ಎಕರೆ ವಿಸ್ತೀರ್ಣದ ಜಾಗವನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ನಿರಾಕ್ಷೇಪಣಾ ಪತ್ರವನ್ನು ಕೋರಿ ಶ್ರೀ ಪ್ರಸಾದ್.ಕೆ.ರವರು ಅರ್ಜಿ ಸಲ್ಲಿಸಿರುವ ಬಗ್ಗೆ.**

**ಟಿಪ್ಪಣಿ:-**ಪ್ರಸ್ತಾವಿತ ಜಾಗವು ಅನುಮೋದಿತ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದ್ದು ಈ ಜಾಗದ ದಕ್ಷಿಣದಲ್ಲಿ 4.50ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:-** ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ) 2021ರನ್ವಯ ವಾಣಿಜ್ಯ ವಲಯದಲ್ಲಿ ನಿಯಾಮಾವಳಿಗಳ ಪ್ರಕಾರ ವಸತಿ ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶವಿರುತ್ತದೆ ಹಾಗೂ ಈ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಲು ಬಂದಿರುವುದರಿಂದ ವಸತಿ ಉಪಯೋಗಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಡಿಸಲಾಗಿದೆ.

**<u>ನಿರ್ಣಯ:–</u>** ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದ್ದರೂ ವಸತಿ ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶವಿರುವುದರಿಂದ ಹಾಲಿ ಇರುವ ರಸ್ತೆಯನ್ನು 9.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಲು ಕ್ರಮ ಕೈಗೊಳ್ಳಬಹುದೆಂದು ಆಯುಕ್ತರಿಗೆ ತಿಳಿಸಿ, ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>6)ವಿಷಯ ಸಂಖ್ಯೆ 6 :</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 201/2ರಲ್ಲಿನ 2.44ಎಕರೆ ವಿಸ್ತೀರ್ಣದ ಜಮೀನನ್ನು ಸರ್ವಿಸ್ ಅಪಾರ್ಟ್‌ಮೆಂಟ್ ನಿರ್ಮಿಸಲು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ಕೋರಿ ಶ್ರೀ ಕೆ.ಎಸ್.ದೇವಯ್ಯರವರು ಅರ್ಜಿ ಸಲ್ಲಿಸಿರುವ ಬಗ್ಗೆ.**

**<u>ಟಿಪ್ಪಣಿ:–</u>** ಪ್ರಸ್ತಾವಿತ ಜಾಗವು ಮಡಿಕೇರಿ ಸೋಮವಾರಪೇಟೆ ರಾಜ್ಯ ಹೆದ್ದಾರಿಯಿಂದ ಉಪಗಮನ ಹೊಂದಿರುವ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತದೆ. ಅರ್ಜಿದಾರರ ಬಾಕಿ ಇರುವ ಸರ್ವೆ ನಂಬರ್ 201/1ರಲ್ಲಿ ಇರುವ ಜಮೀನಿನಲ್ಲಿ ಹಾಲಿ ಇರುವ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ.

**<u>ನಗರಯೋಜನಾ ಸದಸ್ಯರ ಅಭಿಪ್ರಾಯ:–</u>** ಪ್ರಸ್ತಾವಿತ ಜಮೀನಿನ ಸ್ಥಳ ಪರಿಶೀಲಿಸಲಾಯಿತು. ಈ ಜಾಗವು ಮಡಿಕೇರಿ ಸೋಮವಾರಪೇಟೆ ರಾಜ್ಯ ಹೆದ್ದಾರಿಯಿಂದ ಉಪಗಮನ ಹೊಂದಿರುವ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸರ್ವೆ ನಂಬರ್ 201/1ರಲ್ಲಿ ಅರ್ಜಿದಾರರೆ ನಿರ್ಮಿಸಿರುವ ಹಾಲಿ ಇರುವ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ ಹಾಗೂ ಅನುಮೋದಿತ ಮಹಾಯೋಜನೆಯನ್ವಯ ಪ್ರಸ್ತಾವಿತ ಜಾಗವು ವಾಣಿಜ್ಯ ವಲಯದಲ್ಲಿ ಬರುತ್ತಿದ್ದು, ವಾಣಿಜ್ಯ ಉದ್ದೇಶಕ್ಕೆ ಯೋಗ್ಯವಾಗಿರುವುದರಿಂದ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದಾಗಿರುತ್ತದೆ.

ಸಭಾ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**<u>ನಿರ್ಣಯ:–</u>**ಪ್ರಸ್ತಾವಿತ ಜಮೀನು ವಾಣಿಜ್ಯ ವಲಯದಲ್ಲಿ ಬರುತ್ತಿದ್ದು, ಅರ್ಜಿದಾರರ ಜಮೀನಿನಲ್ಲಿ ಇರುವ ರಸ್ತೆಯನ್ನು 12.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲು ಕ್ರಮ ಕೈಗೊಳ್ಳಬಹುದೆಂದು ಆಯುಕ್ತರಿಗೆ ತಿಳಿಸಿ, ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>7) ವಿಷಯಸಂಖ್ಯೆ 7:</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ, ಸರ್ವೆ ನಂಬರ್ 99/9 ರಲ್ಲಿನ 0.20ಎಕರೆ ಹಾಗೂ ಸ.ನಂ.99/14ರಲ್ಲಿನ 0.20ಎಕರೆ ಒಟ್ಟು 0.40ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ಕೋರಿ ಮೆ॥ ಕೊಂಗು ಇಂಡಿಯಾ ರೆಸಾರ್ಟ್ ಪ್ರೈ.ಲಿ ಇವರ ಪರವಾಗಿ ಅಧಿಕಾರ ಪತ್ರ ಹೊಂದಿರುವ ಶ್ರೀ ಪಿ.ಎಸ್.ತಿಮ್ಮಯ್ಯರವರು ಅರ್ಜಿ ಸಲ್ಲಿಸಿರುವ ಬಗ್ಗೆ.**

**<u>ಟಿಪ್ಪಣಿ:–</u>**ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಮಡಿಕೇರಿಯಿಂದ ಸೋಮವಾರಪೇಟೆಗೆ ಹೋಗುವ 14.00ಮೀ ಅಗಲದ ರಾಜ್ಯ ಹೆದ್ದಾರಿ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ.

**<u>ನಗರಯೋಜನಾ ಸದಸ್ಯರ ಅಭಿಪ್ರಾಯ:–</u>**ಪ್ರಸ್ತಾವಿತ ಜಾಗವು ವಸತಿ ಉಪಯೋಗದಲ್ಲಿ ಬರುತ್ತಿದ್ದು, ವಸತಿ ಉದ್ದೇಶಕ್ಕೆ ಯೋಗ್ಯವಾಗಿರುತ್ತದೆ. ಸುತ್ತಮುತ್ತಲು ವಸತಿ ಬೆಳವಣಿಗೆಗಳು ಬಂದಿರುವುದರಿಂದ ಮತ್ತು ಸಮೀಪದಲ್ಲಿ

ನೀರು ವಿದ್ಯುತ್ ಸಂಪರ್ಕಗಳು ಇರುವುದರಿಂದ ಹಾಗೂ ಸ್ಥಳವು ಹಾಲಿ ಪಟ್ಟಣದ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ ಪ್ರಸ್ತಾವನೆಗೆ ವಸತಿ ಉದ್ದೇಶಕ್ಕೆ ಸಭಾ ಅನುಮೋದನೆಯೊಂದಿಗೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

<u>**ನಿರ್ಣಯ:-**</u>ಪ್ರಸ್ತಾವಿತ ಜಮೀನು ಅನುಮೋದಿತ ಮಹಾಯೋಜನೆಯನ್ವಯ ವಸತಿ ಉಪಯೋಗದಲ್ಲಿದ್ದು, ರಸ್ತೆ ಸಂಪರ್ಕವನ್ನು ಹೊಂದಿರುವುದರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ. ಆದರೆ ಶ್ರೀ ಕೆ.ಎಂ.ಕಾರ್ಯಪ್ಪ, ಮಹದೇವಪೇಟೆ, ಮಡಿಕೇರಿರವರು ದಿನಾಂಕ:14.09.2015 ರಂದು ಅರ್ಜಿ ಸಲ್ಲಿಸಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 99/1ರಲ್ಲಿ ಬರುವ ಒಟ್ಟು ವಿಸ್ತೀರ್ಣ 39.94ಎಕರೆ ಜಮೀನಿನ ಬಗ್ಗೆ ಸೀನಿಯರ್ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.ನಂ.77/2013ರಲ್ಲಿ ದಾವೆ ಇದ್ದು, ಸ್ಟೇ ಆಗಿರುವುದರಿಂದ ನ್ಯಾಯಾಲಯದಲ್ಲಿ ಕೇಸ್ ಇತ್ಯರ್ಥ ಆಗುವವರೆಗೆ ಸದರಿ ಸರ್ವೆ ನಂಬರಿನಲ್ಲಿ ಬರುವ ಯಾವುದೇ ಜಾಗಕ್ಕೆ ಭೂ ಪರಿವರ್ತನೆ, ವಿನ್ಯಾಸ ಅನುಮೋದನೆ, ಕಟ್ಟಡ ನಿರ್ಮಿಸಲು ಅನುಮೋದನೆ ನೀಡಬಾರದಾಗಿ ಕೋರಿರುತ್ತಾರೆ ಎಂದು ಸಭೆಯಲ್ಲಿ ಆಯುಕ್ತರು ಮಾಹಿತಿಯನ್ನು ನೀಡಿದರು. ಈ ಸಂಬಂಧ ಅರ್ಜಿದಾರರು ನೀಡಿರುವ ಸ್ಟೇ ಆರ್ಡರ್ ಹಾಗೂ ಇನ್ನಿತರ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಲು ಕ್ರಮ ಕೈಗೊಳ್ಳಬಹುದೆಂದು ವಿಧಾನ ಸಭಾ ಸದಸ್ಯರಾದ ಮಾನ್ಯ ಅಪ್ಪಚ್ಚು ರಂಜನ್‌ರವರು ಆಯುಕ್ತರಿಗೆ ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>8) ವಿಷಯಸಂಖ್ಯೆ 8:</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 65/21ರಲ್ಲಿನ 4.00ಎಕರೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಕೊಡಲು ಕೋರಿ ಶ್ರೀ ಜಿ.ಎಸ್.ವಿ.ಎಸ್.ಎಸ್.ಪ್ರಸಾದ್‌ರವರಿಂದ ಅಧಿಕಾರ ಪತ್ರ ಪಡೆದ ಶ್ರೀ ವಿ. ಸಾಯಿಕುಮಾರ್‌ರವರು ಅರ್ಜಿ ಸಲ್ಲಿಸಿರುವ ಬಗ್ಗೆ.**

<u>**ಟಿಪ್ಪಣಿ:-**</u>ಪ್ರಸ್ತಾಪಿತ ಜಮೀನು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದ್ದು, ಮಡಿಕೇರಿಯಿಂದ ಗಾಳಿಬೀಡಿಗೆ ಹಾದು ಹೋಗುವ ರಸ್ತೆಯಿಂದ ಸಂಪರ್ಕವಿದೆ. ಪಶ್ಚಿಮಕ್ಕೆ 12.00ಮೀ, ಉತ್ತರಕ್ಕೆ 6.00ಮೀ ಹಾಗೂ ದಕ್ಷಿಣಕ್ಕೆ 4.50ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದ ಸುತ್ತಮುತ್ತಲು ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ.

<u>**ನಗರಯೋಜನಾ ಸದಸ್ಯರ ಅಭಿಪ್ರಾಯ:-**</u> ಮಡಿಕೇರಿ ನಗರದ ಮಹಾಯೋಜನೆಯಂತೆ ಪ್ರಸ್ತಾವಿತ ಜಾಗವು ವಾಣಿಜ್ಯ ವಲಯದಲ್ಲಿದ್ದು, ಸ್ಥಳವು ಹಾಲಿ ಪಟ್ಟಣದ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಕ್ಕೆ ಹೊಂದಿಕೊಂಡಿದ್ದು ಮತ್ತು ಸಮೀಪದಲ್ಲಿ ವಿದ್ಯುತ್, ನೀರು ಹಾಗೂ ಇತರ ಸೌಲಭ್ಯಗಳು ಇರುವುದರಿಂದ ಪ್ರಾಧಿಕಾರದ ಸಭಾ ಅನುಮೋದನೆಯೊಂದಿಗೆ ನಿಯಾಮಾನುಸಾರ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದಾಗಿರುತ್ತದೆ.

<u>**ನಿರ್ಣಯ:-**</u>ಪ್ರಸ್ತಾವಿತ ಜಮೀನನ್ನು ಸರ್ಕಾರದ ನಡಾವಳಿ ಆದೇಶ ಸಂಖ್ಯೆ:ನಅಇ/148/ಮೈಅಪ್ರಾ/2011, ಬೆಂಗಳೂರು, ದಿನಾಂಕ:27.07.2011ರಲ್ಲಿ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿ ಆದೇಶವಾಗಿರುತ್ತದೆ ಹಾಗೂ ಹಾಲಿ ಅನುಮೋದಿತ ಮಹಾಯೋಜನೆಯನ್ವಯ ವಾಣಿಜ್ಯ

ವಲಯದಲ್ಲಿ ಬರುತ್ತಿರುವುದರಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಆಯುಕ್ತರು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>9) ವಿಷಯಸಂಖ್ಯೆ 9:-</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂಬರ್ 117/1, 117/2, 81/4, 79, 78/1,2,3, 77, 76/2,4 ಮತ್ತು 121ರಲ್ಲಿ ಬರುವ ಒಟ್ಟು 27.30ಎಕರೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ (ಹೊಟೇಲ್ ಮತ್ತು ರೆಸಾರ್ಟ್ ನಿರ್ಮಿಸಲು) ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ಕೋರಿ ಶ್ರೀ ಟಿ.ಜಾನ್, ಶ್ರೀ ಥೋಮಸ್ ಪಿ.ಜಾನ್ ಮತ್ತು ಶ್ರೀ ಬಿಜು ಜಾನ್‌ರವರುಗಳಿಂದ ಅಧಿಕಾರ ಪತ್ರ ಪಡೆದಿರುವ ಶ್ರೀ ಪೌಲ್ ಪಿ.ಜಾನ್‌ರವರು ಅರ್ಜಿ ಸಲ್ಲಿಸುರುವ ಬಗ್ಗೆ.**

**<u>ಟಿಪ್ಪಣಿ:-</u>**ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದ ಮೇಕೇರಿ ಗ್ರಾಮದಲ್ಲಿ ಬರುತ್ತಿದ್ದು, ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದೆ ಹಾಗೂ ಮಡಿಕೇರಿ ಮೇಕೇರಿ ರಾಜ್ಯ ಹೆದ್ದಾರಿ ರಸ್ತೆಯಿಂದ ಹಾದು ಹೋಗುವ 5.00ಮೀ ಅಗಲದ ಉಪಗಮನ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ.

**<u>ನಗರಯೋಜನಾ ಸದಸ್ಯರ ಅಭಿಪ್ರಾಯ:-</u>**ಪ್ರಸ್ತಾವಿತ ಜಾಗವು ಮಹಾಯೋಜನೆಯನ್ವಯ ವಾಣಿಜ್ಯ ವಲಯದಲ್ಲಿ ಬರುತಿದ್ದು, ವಾಣಿಜ್ಯ ಉದ್ದೇಶಕ್ಕೆ ಯೋಗ್ಯವಾಗಿರುವುದರಿಂದ, ಮಡಿಕೇರಿ ನಗರಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವುದರಿಂದ ಪ್ರವಾಸಿಗರ ಅನುಕೂಲತೆಯ ಹಿತಾದೃಷ್ಟಿಯಿಂದ ಹಾಲಿ ಇರುವ 5.00ಮೀ ಅಗಲದ ರಸ್ತೆಯನ್ನು 12.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ಸಭಾ ಅನುಮೋದನೆಯೊಂದಿಗೆ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದಾಗಿರುತ್ತದೆ.

ಸಭಾ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

**<u>ನಿರ್ಣಯ:-</u>**ಪ್ರಸ್ತಾವಿತ ಜಮೀನು ಅನುಮೋದಿತ ಮಹಾಯೋಜನೆಯನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದ್ದು, ಸದರಿ ಭೂ ಮಾಲೀಕರ ಜಮೀನಿನಲ್ಲಿ ಹಾಲಿ ಇರುವ ರಸ್ತೆಯನ್ನು 12.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>10) ವಿಷಯಸಂಖ್ಯೆ 10:-</u> ಮಡಿಕೇರಿ ನಗರಸಭಾ ವ್ಯಾಪ್ತಿಯ ಕನ್ನಂಡಬಾಣೆ ಕೆರೆಗೆ ಬರುವ ಕಲುಷಿತ ನೀರನ್ನು ತಡೆಗಟ್ಟುವ ಸಲುವಾಗಿ ಯು.ಜಿ.ಡಿ ಮೂಲಕ ಪೈಪ್‌ಲೈನ್ ಅಳವಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.**

**<u>ಟಿಪ್ಪಣಿ:-</u>**ನಗರಸಭಾ ವ್ಯಾಪ್ತಿಯ ಕನ್ನಂಡಬಾಣೆಯಲ್ಲಿರುವ ಶುದ್ಧ ನೀರು ಘಟಕವಾದ ಕನ್ನಂಡಬಾಣೆ ಪಂಪಿನ ಕೆರೆಗೆ ಕೆರೆಯ ಆಸುಪಾಸಿನ ಜಾಗ ಮತ್ತು ಸುತ್ತಮುತ್ತಲು ಇರುವ ಮನೆಗಳಿಂದ ಕಲುಷಿತ ನೀರು ಹರಿದು ನೇರವಾಗಿ ಸೇರುತ್ತಿದ್ದು, ಶುದ್ಧವಾದ ಕುಡಿಯುವ ನೀರು ಸಹ ಮಲೀನಗೊಳ್ಳುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಯು.ಜಿ.ಡಿ ಪೈಪ್‌ಲೈನ್‌ಗಳನ್ನು ಅಳವಡಿಸುವ ಯೋಜನೆಯನ್ನು ಹಮ್ಮಿಕೊಳ್ಳುವ ಬಗ್ಗೆ ಈ ಕಚೇರಿಯಿಂದ ಪೌರಾಯುಕ್ತರು ನಗರಸಭೆ, ಮಡಿಕೇರಿರವರನ್ನು ಸದರಿ ಯೋಜನೆಗೆ ಆಗುವ ಖರ್ಚಿನ ಅಂದಾಜು ಪಟ್ಟಿಯನ್ನು ಸಲ್ಲಿಸಲು ಕೋರಲಾಗಿತ್ತು. ಇದಕ್ಕೆ ಪ್ರತಿಯಾಗಿ ಪೌರಾಯುಕ್ತರು, ನಗರಸಭೆ, ಮಡಿಕೇರಿರವರು ಅವರ ಪತ್ರ ಸಂಖ್ಯೆ:ಮನಸ/ತಾಂತ್ರಿಕ/ಜೆ.ಇ/03/27/2015-16, ದಿನಾಂಕ:21.08.2015ರ ಪತ್ರದೊಂದಿಗೆ ಅಂದಾಜು ರೂ.20.00 ಲಕ್ಷದ ದರಪಟ್ಟಿಯನ್ನು ಲಗತ್ತಿಸಿ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಅನುದಾನವನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಖಾಸಗಿ ವಿನ್ಯಾಸಕ್ಕೆ ತಾಂತ್ರಿಕ ಅನುಮೋದನೆ ನೀಡುವ ಸಂಧರ್ಭದಲ್ಲಿ ಪಾವತಿಸಿಕೊಳ್ಳುತ್ತಿರುವ ಕೆರೆ ಅಭಿವೃದ್ಧಿ ಶುಲ್ಕದಲ್ಲಿ ಅಂದಾಜು ರೂ.10.00ಲಕ್ಷ ಹಣವನ್ನು ನಗರಸಭೆಗೆ ಹಸ್ತಾಂತರಿಸುವ ಬಗ್ಗೆ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳಲು ವಿಷಯವನ್ನು ಪ್ರಾಧಿಕಾರದ ಸಭಾ ಅನುಮೋದನೆಗಾಗಿ ಮಂಡಿಸಿದೆ.

**<u>ನಿರ್ಣಯ:-</u>** ಕನ್ನಂಡಬಾಣೆ ಪಂಪಿನಕೆರೆಗೆ ಯು.ಜಿ.ಡಿ.ಪೈಪ್ ಲೈನ್ ಅಳವಡಿಸುವ ಬಗ್ಗೆ ಪ್ರಾಧಿಕಾರದ ವತಿಯಿಂದ ರೂ.10.00ಲಕ್ಷ ಹಣವನ್ನು ನಗರಸಭೆಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡು ಸೂಕ್ತ ಕ್ರಮ ಕೈಗೊಳ್ಳಬಹುದೆಂದು ಸಭೆಯು ಅಂಗೀಕಾರ ನೀಡಿತು ಹಾಗೂ ಈ ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/36/ಗುಅಪ್ರಾ/2015, ದಿನಾಂಕ:04.08.2015ರ ಪತ್ರದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಾಧಿಕಾರ ಆಯ್ಕೆ ಮಾಡುವ ಕೆರೆಯ ಸಂರಕ್ಷಣೆಗನುಗುಣವಾಗಿ ಸಿದ್ದಪಡಿಸಲಾದ ವಿಸ್ತೃತ ಯೋಜನಾ ವರದಿಯೊಂದಿಗೆ ಪೂರಕ ದಾಖಲಾತಿಗಳನ್ನೊಳಗೊಂಡಂತೆ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಹಮತ/ಮೇಲು ರುಜುವಿನೊಂದಿಗೆ ಸರ್ಕಾರದ ಪೂರ್ವಾನುಮತಿಯನ್ನು ಪಡೆದುಕೊಂಡು ಕೆರೆ ಸಂರಕ್ಷಣೆಯ ಕಾಮಗಾರಿಯನ್ನು ನಿಯಾಮಾನುಸಾರ ಗುತ್ತಿಗೆ ನೀಡುವ ಪೂರ್ವದಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಚಾಚು ತಪ್ಪದೇ ಕಡ್ಡಾಯವಾಗಿ ಪಾಲಿಸತಕ್ಕದೆಂದು ಮಾರ್ಗಸೂಚಿಯನ್ನು ನೀಡಲಾಗಿರುತ್ತದೆ. ಅದರಂತೆ ಕನ್ನಂಡಬಾಣೆ ಪಂಪಿನ ಕೆರೆಗೆ ಯು.ಜಿ.ಡಿ.ಪೈಪ್‌ಲೈನ್ ಅಳವಡಿಸಲು ನಗರಸಭೆಯಿಂದ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ತಿಳಿಸಿದರು. ಪೌರಾಯುಕ್ತರು ಈ ಬಗ್ಗೆ ಪ್ರತಿಕ್ರಿಯಿಸುತ್ತಾ ಸರ್ಕಾರದ ಸುತ್ತೋಲೆಯಂತೆ ಪ್ರಸ್ತಾವನೆಗೆ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಸರ್ಕಾರದಿಂದ ಅನುಮೋದನೆ ಪಡೆದುಕೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>11) ವಿಷಯಸಂಖ್ಯೆ 11:-</u> ನೆಹರು ಮಂಟಪದ ದುರಸ್ಥಿ ಮತ್ತು ಅದರ ಸುತ್ತಲಿನ ಖಾಲಿ ಇರುವ ಪ್ರದೇಶಕ್ಕೆ ಹುಲ್ಲು ಹಾಸು ಹಾಸಿ, ಕಲ್ಲಿನ ಬೆಂಚುಗಳನ್ನು ಅಳವಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.**

**<u>ಟಿಪ್ಪಣಿ:-</u>**ಕೊಡಗು ಜಿಲ್ಲೆಯನ್ನು ಪ್ರವಾಸಿ ತಾಣವಾಗಿ ಸರ್ಕಾರವು ಘೋಷಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ಮಡಿಕೇರಿ ನಗರದ ವ್ಯಾಪ್ತಿಯೊಳಗೆ ರಾಜಸೀಟು, ಅಬ್ಬಿಫಾಲ್ಸ್, ಓಂಕಾರೇಶ್ವರ ದೇವಾಲಯ, ಗದ್ದುಗೆ ಹಾಗೂ ಕೋಟೆಯನ್ನು ಹೊರತುಪಡಿಸಿದರೆ ಇನ್ನಿತರ ಯಾವುದೇ ಪ್ರವಾಸಿ ತಾಣಗಳು
ಇರುವುದಿಲ್ಲ ಇದನ್ನು ಪರಿಗಣಿಸಿ, ರಾಜಸೀಟ್ ಮತ್ತು ಆಕಾಶವಾಣಿ ಕೇಂದ್ರದ ಹತ್ತಿರವಿರುವ ಸ್ಟೋನ್ ಹಿಲ್ ರಸ್ತೆಯಿಂದ ಸಂಪರ್ಕವನ್ನು ಹೊಂದಿರುವ ಈಗಾಗಲೇ ನಿರ್ಮಿಸಿ ಹಳೆಯದಾಗಿ ದುರಸ್ಥಿಯಾಗಿರುವ ನೆಹರು ಮಂಟಪದ ಪ್ರದೇಶವು ಎತ್ತರದಲ್ಲಿದ್ದು, ಪ್ರಕೃತಿಯನ್ನು ವೀಕ್ಷಿಸಲು ಸುಂದರವಾದ ಕೇಂದ್ರವಾಗಿರುತ್ತದೆ. ಆದ್ದರಿಂದ ಹೆಚ್ಚಿನ ಅಲಂಕಾರವಿಲ್ಲದೆ ಅತ್ಯಂತ ಕಡಿಮೆ ವೆಚ್ಚದಲ್ಲಿ ನೆಹರು ಮಂಟಪವನ್ನು ದುರಸ್ಥಿ ಪಡಿಸಿ, ಆ ಮಂಟಪದ ಸುತ್ತಲು ಬರುವ ಖಾಲಿ ಜಾಗದಲ್ಲಿ ಹುಲ್ಲು ಹಾಸುಗಳನ್ನು ಹಾಸುವುದು ಹಾಗೂ ಕಲ್ಲಿನ ಬೆಂಚುಗಳನ್ನು ಅಳವಡಿಸಲು ಆಗುವ ವೆಚ್ಚಕ್ಕೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಸರ್ಕಾರದ ಅನುಮೋದನೆಯೊಂದಿಗೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಪ್ರಾಧಿಕಾರವು ಸಿ.ಎ.ನಿವೇಶನ ಮತ್ತು ಉದ್ಯಾನವನಕ್ಕೆಂದು ಕಾಯ್ದಿರಿಸಿರುವ ಜಮೀನನ್ನು ಭೂ ಮಾಲೀಕರಿಗೆ ಬಿಟ್ಟುಕೊಟ್ಟು ಅದಕ್ಕೆ ಬದಲಾಗಿ ಪಾವತಿಸಕೊಂಡಿರುವ ವಿನಾಯಿತಿ ಶುಲ್ಕದಿಂದ ನೆಹರು ಮಂಟಪ ಮತ್ತು ಉದ್ಯಾನವನವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ. ಇದರಿಂದ ರಾಜಸೀಟು

ಮತ್ತು ನೆಹರು ಮಂಟಪದ ವೀಕ್ಷಣೆಗಾಗಿ ಬರುವ ಸಾರ್ವಜನಿಕರು/ಪ್ರವಾಸಿಗರಿಗೆ ಜನದಟ್ಟಣೆಯಿಂದ ಅನಾನುಕೂಲತೆ ಆಗುವುದನ್ನು ತಡೆಗಟ್ಟಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-**ದುರಸ್ಥಿಯಲ್ಲಿರುವ ನೆಹರು ಮಂಟಪ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಖಾಲಿ ಜಾಗವನ್ನು ಪ್ರಾಧಿಕಾರದಿಂದ ಅತ್ಯಂತ ಕನಿಷ್ಟ ವೆಚ್ಚದಲ್ಲಿ ಸರ್ಕಾರದ ಮಂಜೂರಾತಿಯೊಂದಿಗೆ ದುರಸ್ಥಿಪಡಿಸಲು ಯೋಜನೆಯನ್ನು ಹಮ್ಮಿಕೊಂಡಲ್ಲಿ ರಾಜಸೀಟ್‌ನಲ್ಲಿ ಉಂಟಾಗುವ ಜನದಟ್ಟಣಿ ಮತ್ತು ವಾಹನ ದಟ್ಟಣೆಯನ್ನು ನಿಯಂತ್ರಿಸಲು ಸುಲಭ ಸಾಧ್ಯವಾಗುತ್ತದೆ ಮತ್ತು ಪಾರ್ಕಿಂಗ್ ವ್ಯವಸ್ಥೆಯನ್ನು ಸುಧಾರಿಸಕೊಳ್ಳಲು ಸಹ ಸಾಧ್ಯವಾಗುತ್ತದೆ ಎಂದು ಸಭೆಯಲ್ಲಿ ಪ್ರಾಧಿಕಾರದ ಅಧ್ಯಕ್ಷರು ತಿಳಿಸಿದರು. ಈ ಸಂಧರ್ಭದಲ್ಲಿ ನಗರಸಭಾ ಪೌರಾಯುಕ್ತರು ನೆಹರುಮಂಟಪ ಹಾಗೂ ರಾಜಸೀಟ್‌ನ ಸುತ್ತಮುತ್ತಲು ಬರುವ ಖಾಲಿ ಜಾಗವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಈಗಾಗಲೇ ಜಿಲ್ಲಾಡಳಿತ ಹಾಗೂ ರಾಜಸೀಟು ಅಭಿವೃದ್ಧಿ ಪ್ರಾಧಿಕಾರ ಯೋಜನೆಯನ್ನು ಹಮ್ಮಿಕೊಂಡಿರಬೇಕೆಂದು, ಈ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಪಡೆದುಕೊಂಡು ನಂತರದಲ್ಲಿ ಯೋಜನೆ ಬಗ್ಗೆ ಪ್ರಸ್ತಾಪಿಸುವುದು ಸೂಕ್ತವೆಂದು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಈ ಪ್ರಸ್ತಾವನೆಗೆ ಜಿಲ್ಲಾಡಳಿತ ಮತ್ತು ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರವು ಕ್ರಮ ಕೈಗೊಂಡಿದ್ದರೆ ಪ್ರಾಧಿಕಾರದಿಂದ ಸದರಿ ಯೋಜನೆಯನ್ನು ಕೈಬಿಡಬಹುದೆಂದು ಇಲ್ಲದಿದ್ದಲ್ಲಿ ಸರ್ಕಾರದ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕೈಗೆತ್ತಿಕೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**12)ವಿಷಯಸಂಖ್ಯೆ 12:- ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಹಿಂದೆ ಅನುಮೋದಿಸಿರುವ ಖಾಸಗಿ ವಿನ್ಯಾಸಗಳಲ್ಲಿನ ಸಿ.ಎ. ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಖಾತೆ ವರ್ಗಾವಣೆ ಮಾಡುವ ಬಗ್ಗೆ.**

**ಟಿಪ್ಪಣಿ:-**ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿ ವಿನ್ಯಾಸವನ್ನು ಅನುಮೋದಿಸುವಾಗ ಸಿ.ಎ.ನಿವೇಶನವೆಂದು ಕಾಯ್ದಿರಿಸುವ ಜಾಗವನ್ನು ಪ್ರಾಧಿಕಾರಕ್ಕೆ/ಸ್ಥಳೀಯ ಸಂಸ್ಥೆಗೆ ದಾನ ಪತ್ರದ ಮೂಲಕ ಫಲಾಫಲಾಪೇಕ್ಷೆಯಿಲ್ಲದೆ ನೋಂದಣಿ ಮಾಡಿಕೊಡಬೇಕಾಗಿರುತ್ತದೆ. ಈ ಹಿಂದೆ ಖಾಸಗಿ ವಿನ್ಯಾಸಗಳನ್ನು ಅನುಮೋದಿಸುವಾಗ ಸಿ.ಎ.ನಿವೇಶನಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲು ತಿಳಿಸಲಾಗಿದೆ. ಆದರೆ ಇಂತಹ ವಿನ್ಯಾಸಗಳಲ್ಲಿನ ಭೂ ಮಾಲೀಕರು ದಾನ ಪತ್ರದ ಮೂಲಕ ನಗರಸಭೆಗೆ ಹಸ್ತಾಂತರಿಸದೆ ಸದರಿ ಲೇಔಟಿನ ಜಾಗವು ಅತಿಕ್ರಮಣವಾಗಿರುವುದು ಅಥವಾ ಭೂ ಮಾಲೀಕರೇ ಇಟ್ಟುಕೊಳ್ಳುವುದು/ಮಾರಾಟ ಮಾಡಿರುವುದು ಕಂಡುಬರುತ್ತಿದೆ. ಇದಕ್ಕೆ ಅವಕಾಶವಾಗದಂತೆ ಸಿ.ಎ.ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ನಗರಸಭೆಯಿಂದ ಖಾತೆ ವರ್ಗಾವಣೆ ಮಾಡಿಕೊಂಡಲ್ಲಿ ಸಾರ್ವಜನಿಕ ಉದ್ದೇಶದ ಕೆಲಸಗಳಿಗಾಗಿ ಪ್ರಾಧಿಕಾರವು ಹರಾಜು ಹಾಕಿದಲ್ಲಿ ಪ್ರಾಧಿಕಾರದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅನುಕೂಲವಾಗುತ್ತದೆ ಅಲ್ಲದೆ ಈಗಾಗಲೇ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಸಿ.ಪಿ.ಸಿ.ಲೇಔಟ್‌ನಲ್ಲಿರುವ ಸಿ.ಎ.ನಿವೇಶನದ ಜಾಗಕ್ಕೆ ನಗರಸಭೆಯಿಂದ ಪ್ರಾಧಿಕಾರದ ಹೆಸರಿಗೆ ಖಾತೆ ವರ್ಗಾವಣೆ ಮಾಡಿದಲ್ಲಿ ಪ್ರಾಧಿಕಾರಕ್ಕೆ ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಅನುಕೂಲವಾಗುತ್ತದೆ.

ಆದ್ದರಿಂದ ನಗರಸಭಾ ವ್ಯಾಪ್ತಿಯಲ್ಲಿ ಎಲ್ಲಾ ಖಾಸಗಿ ವಿನ್ಯಾಸ ನಕ್ಷೆಗಳಲ್ಲಿನ ಸಿ.ಎ.ನಿವೇಶನಕ್ಕೆಂದು ಕಾಯ್ದಿರಿಸಿರುವ ಜಾಗವನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾತರಿಸಿ ಅಥವಾ ಖಾತೆ ವರ್ಗಾವಣೆ ಮಾಡಿ ಕೊಡುವ ಬಗ್ಗೆ ಸಭಾ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

**ನಿರ್ಣಯ:-**ಈಗಾಗಲೇ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಖಾಸಗಿ ವಿನ್ಯಾಸಗಳಲ್ಲಿನ ರಸ್ತೆ, ಉದ್ಯಾನವನ ಮತ್ತು ಬಯಲುಜಾಗ ಹಾಗೂ ಸಿ.ಎ.ನಿವೇಶನಗಳಿಗೆಂದು ಕಾಯ್ದಿರಿಸಿದ ಜಾಗವನ್ನು ನಗರಾಭಿವೃದ್ಧಿ ಪ್ರಾಧಿಕಾರ/ನಗರಸಭೆಗೆ ಮುಕ್ತಟೆಯಾಗಿ ದಾನಪತ್ರದ ಮೂಲಕ ನೋಂದಾಯಿಸಿ ಕೊಡಬೇಕೆಂದು ಆದೇಶವಿರುವುದರಿಂದ ಅದರಂತೆ ರಸ್ತೆ ಮತ್ತು ಪಾರ್ಕ್ ಜಾಗವನ್ನು ನಗರಸಭೆಗೆ ಮತ್ತು ಸಿ.ಎ.ನಿವೇಶನವನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ದಾನಪತ್ರದ ಮೂಲಕ ನೋಂದಾಯಿಸಿ ಕೊಟ್ಟಲ್ಲಿ ಪ್ರಾಧಿಕಾರವು ಸಿ.ಎ.ನಿವೇಶನವನ್ನು ಹರಾಜು ಮಾಡಿದಲ್ಲಿ ಪ್ರಾಧಿಕಾರದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದೆಂದು ಹಾಗೂ ಪ್ರಾಧಿಕಾರಕ್ಕೆ ಸ್ವಂತ ಕಟ್ಟಡವಿಲ್ಲದ ಕಾರಣ ಪ್ರಾಧಿಕಾರವು ಸದರಿ ಜಾಗದಲ್ಲಿ ಕಚೇರಿ ಕಟ್ಟಡವನ್ನು ನಿರ್ಮಿಸಿಕೊಳ್ಳಲು ಹಾಗೂ ವಾಹನ ಪಾರ್ಕಿಂಗ್‌ಗಾಗಿ ಜಾಗವನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸುತ್ತಾ, ಸಿ.ಎ.ನಿವೇಶನಕ್ಕೆಂದು ಕಾಯ್ದಿರಿಸಿದ ಜಾಗವನ್ನು ಪ್ರಾಧಿಕಾರದ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡಬೇಕೆಂದು ಸಭೆಯಲ್ಲಿ ಅಧ್ಯಕ್ಷರು ಪೌರಾಯುಕ್ತರಿಗೆ ಸೂಚಿಸಿದರು. ಇದಕ್ಕೆ ಪೌರಾಯುಕ್ತರು ಪ್ರತಿಕ್ರಿಯಿಸುತ್ತಾ, ನಗರಸಭಾ ವ್ಯಾಪ್ತಿಯಲ್ಲಿ ಬರುವ ಖಾಸಗಿ ವಿನ್ಯಾಸಗಳಲ್ಲಿನ ಸಿ.ಎ.ನಿವೇಶನಗಳ ಖಾತೆಯನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸುವ ಬಗ್ಗೆ ಪ್ರಸ್ತಾವನೆಯನ್ನು ನಗರಸಭಾ ಸಭೆಯಲ್ಲಿ ಮಂಡಿಸಿ, ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಈ ಸಂಧರ್ಭದಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಪ್ಪಚ್ಚುರಂಜನ್‌ರವರು ಪ್ರತಿಕ್ರಿಯೆ ನೀಡುತ್ತಾ, ಖಾಸಗಿ ವಿನ್ಯಾಸಗಳಲ್ಲಿನ ಉದ್ಯಾನವನ ಮತ್ತು ಬಯಲು ಪ್ರದೇಶ, ಸಿ.ಎ.ನಿವೇಶನಗಳನ್ನು ಅತಿಕ್ರಮಣ ಮಾಡುವುದು/ಭೂ ಮಾಲೀಕರು ಮಾರಾಟ ಮಾಡುವುದು ಅಥವಾ ಭೂ ಮಾಲೀಕರೆ ಇಟ್ಟುಕೊಳ್ಳುವಂತಹ ಪ್ರಸಂಗಗಳೇ ಹೆಚ್ಚಾಗಿ ಬರುವುದರಿಂದ ಇಂತಹ ನಿವೇಶನಗಳನ್ನು ನಗರಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದಿಂದ ಜಂಟಿಯಾಗಿ ಸ್ಥಳ ಪರಿಶೀಲಿಸಿ, ಅತಿಕ್ರಮಣವಾಗಿದ್ದರೆ ನಿರ್ದಾಕ್ಷಿಣ್ಯವಾಗಿ ನೊಟೀಸು ನೀಡಿ ಕ್ರಮ ಕೈಗೊಳ್ಳುವಂತೆಯೂ ಜಾಗವು ಖಾಲಿ ಇದ್ದರೆ ನಗರಸಭೆಯಿಂದ ತಂತಿ ಬೇಲಿಯನ್ನು ಅಳವಡಿಸಿ ನಗರಸಭಾ ಆಸ್ತಿ ಎಂದು ನಾಮಫಲಕ ಹಾಕಿ ನಿವೇಶನಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವಂತೆಯೂ ಸಿ.ಎ.ನಿವೇಶನಗಳ ಖಾತೆಯನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸುವ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದ ಮಾಹಿತಿಯನ್ನು ಪಡೆದುಕೊಂಡು ಅದರಂತೆ ಕ್ರಮ ವಹಿಸಲು ಸಭೆಯಲ್ಲಿ ಸೂಚಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**13) ವಿಷಯ ಸಂಖ್ಯೆ 13 :- ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.**

**1) ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರಿ ಜಾಗವನ್ನು ಮಂಜೂರು ಮಾಡಿಸಿಕೊಂಡು ನಿವೇಶನಗಳನ್ನು ಅಭಿವೃದ್ಧಿ ಪಡಿಸಿ, ಸಾರ್ವಜನಿಕರಿಗೆ ಹಂಚುವ ಯೋಜನೆಯನ್ನು ಹಮ್ಮಿಕೊಳ್ಳುವ ಬಗ್ಗೆ.**

**ನಿರ್ಣಯ:-**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೆ.ನಿಡುಗಣೆ ಗ್ರಾಮದ ಸರ್ವೆ ನಂಬರ್ 1/13ಪಿ3 ರಲ್ಲಿ ಅಂದಾಜು 61.78ಎಕರೆ ವಿಸ್ತೀರ್ಣದ ಸರ್ಕಾರಿ ಜಮೀನಿದ್ದು, ಮಡಿಕೇರಿಯಿಂದ ಅಂದಾಜು 7.00ಕಿ.ಮೀ ದೂರದಲ್ಲಿದ್ದು, ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಸೂಕ್ತವಾಗಿರುತ್ತದೆ ಎಂದು ಈ ಜಮೀನನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರು ಮಾಡಿಕೊಡಬೇಕಾಗಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿರವರನ್ನು ಕೋರಲಾಗಿರುತ್ತದೆ ಎಂದು ಪ್ರಾಧಿಕಾರದ ಅಧ್ಯಕ್ಷರು ಸಭೆಯಲ್ಲಿ ವಿವರಿಸುತ್ತಾ, ಸದರಿ ಯೋಜನೆಗೆ ಪಾಧಿಕಾರದ ಅಭಿಪ್ರಾಯವನ್ನು ಕೋರಿದರು.

ಪ್ರಾಧಿಕಾರವು ಈವರೆವಿಗೂ ಯಾವುದೇ ವಸತಿ ಯೋಜನೆಯನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲು ಸಾಧ್ಯವಾಗಿರುವುದಿಲ್ಲವಾದ ಕಾರಣ ಇದೊಂದು ಉತ್ತಮ ಯೋಜನಯಾಗಿದ್ದು, ಈ ಬಗ್ಗೆ ಆದಷ್ಟು ಶೀಘ್ರವಾಗಿ ಭೂ ಮಂಜೂರಾತಿಯನ್ನು ಮಾಡಿಸಿಕೊಂಡು ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದುಕೊಂಡು ಯೋಜನೆಯನ್ನು ಕಾರ್ಯಗತಗೊಳಿಸುವುದು ಸೂಕ್ತ ಎಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**2) ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹೊರಗುತ್ತಿಗೆಯಲ್ಲಿ ನೇಮಿಸಿಕೊಂಡಿರುವ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ಗ್ರೂಪ್ ನೌಕರರುಗಳ ಸೇವೆಯನ್ನು ಪ್ರಾಧಿಕಾರದಲ್ಲೇ ಮುಂದುವರೆಸುತ್ತಾ ಅವರ ವೇತನವನ್ನು ಪರಿಷ್ಕರಿಸಿ ಪಾವತಿಸುವ ಬಗ್ಗೆ ಸಭಾ ಅನುಮೋದನೆಗಾಗಿ.**

**ನಿರ್ಣಯ:-**ಈ ಕಚೇರಿಗೆ ಮೆ॥ಓಶಿಯನ್ ಸೆಕ್ಯೂರಿಟಿ ಸರ್ವಿಸಸ್, ವಿರಾಜಪೇಟರವರ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಕಂಪ್ಯೂಟರ್ ಆಪರೇಟರ್ ಮತ್ತು ಡಿ ಗ್ರೂಪ್ ನೌಕರರುಗಳಿಬ್ಬರನ್ನು ನೇಮಿಸಿಕೊಂಡು ಕಚೇರಿಯ ದೈನಂದಿನ ಕೆಲಸಗಳನ್ನು ನಿರ್ವಹಿಸುತ್ತಿರುವುದಾಗಿದೆ ಹಾಗೂ ಇವರುಗಳಿಗೆ ಪ್ರಾಧಿಕಾರದ ನಿಧಿಯಿಂದ ತಲಾ ರೂ.7,700/- ಮತ್ತು 6,600/- ಗಳನ್ನು ಪಾವತಿಸುತ್ತಿರುವುದಾಗಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್ ಮತ್ತು ಡಿ ಗ್ರೂಪ್ ನೌಕರರುಗಳಿಗೆ ತಲಾ ರೂ. 9,800/- ಮತ್ತು ರೂ.8,000/-ಗಳನ್ನು ಪಾವತಿಸಲು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರುರವರು ಮಂಜೂರಾತಿ ನೀಡಿರುವುದನ್ನು ಪರಿಗಣಿಸಿ, ಈ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ಗ್ರೂಪ್ ನೌಕರರುಗಳಿಬ್ಬರಿಗೂ ಈಗಾಗಲೇ ಪಾವತಿಸುತ್ತಿರುವ ರೂ.7,700/- ಮತ್ತು ರೂ. 6,600/-ಗಳನ್ನು ಪರಿಷ್ಕರಿಸಿ ರೂ.9,800/- ಮತ್ತು ರೂ.8,000/-ಗಳನ್ನು ಪಾವತಿಸುವ ಬಗ್ಗೆ ಆಯುಕ್ತರು ಸಭಾ ಅನುಮೋದನೆಯನ್ನು ಕೋರಿದರು.

ಇದಕ್ಕೆ ಮಾನ್ಯ ವಿಧಾನ ಸಭಾ ಸದಸ್ಯರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಒಪ್ಪಿ ಪರಿಷ್ಕೃತ ವೇತನ ದರ ರೂ. 9,800/- ಮತ್ತು ರೂ. 8,000/-ಗಳನ್ನು ನಿಯಾಮನುಸಾರ ಪಾವತಿಸಲು ಕ್ರಮ ಕೈಗೊಳ್ಳಬಹುದೆಂದು ಸರ್ವಾನುಮತದ ಅಂಗೀಕಾರ ನೀಡಿದರು.

**ಸಹಿ/-**
**(ಶ್ರೀಮತಿ ಸುರಯ್ಯಾ ಅಬ್ರಾರ್)**
**ಅಧ್ಯಕ್ಷರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/-**
**(ಶ್ರೀ ಬಿ.ಪಿ.ರಾಜಶೇಖರ್)**
**ಆಯುಕ್ತರು(ಪ್ರ),**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**